**ದಿನಾಂಕಃ 23.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಸೂಚನೆಃ** ನನ್ನ ಹೆಸರು ಸ್ನೇಹ ಧಾರವಾಡ್ ಆಗಿದೆ. ಆದರೆ ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ 1 ರಲ್ಲಿ ನನ್ನ ಹೆಸರನ್ನು ಲಕ್ಷ್ಮೀ ಕೋಂ ಸುಧಾಕರ ಎಂದು ಕಣ್ತಪ್ಪಿನಿಂದ ತೋರಿಸಲಾಗಿದೆ. ಆದ ಕಾರಣದಿಂದ ನನ್ನ ಹೆಸರನ್ನು ಮತ್ತು ನನ್ನ ವಯಸ್ಸನ್ನು ಮತ್ತು ನನ್ನ ಗಂಡನ ಹೆಸರನ್ನು ಮತ್ತು ವಿಳಾಸದ ಬಗ್ಗೆ ನನ್ನ ಸಾಕ್ಷಿ ಪ್ರಮಾಣ ಪತ್ರದ ಶೀರ್ಷಿಕೆಯಲ್ಲಿ ಸರಿಯಾಗಿ ಬರೆಯಲಾಗಿದೆ ಮತ್ತು ಅದನ್ನು ಓದಿಕೊಳ್ಳಬೇಕು ಎಂದು ನಮ್ರತೆಯಿಂದ ಪಾರ್ಥಿಸುತ್ತೇನೆ.

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.ಎಸ್.ವಿ.ಎಸ್.ಆರ್. ರವರಿಂದಃ**

1) ಅಪಘಾತವು ಆದ ಎರಡು ದಿನಗಳ ನಂತರ ಪೋಲಿಸರಿಗೆ ದೂರನ್ನು ಕೊಡಲಾಗಿದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ನನ್ನ ಗಂಡನು ಕಾರನ್ನು ಚಾಲನೆ ಮಾಡುತ್ತಿದ್ದರು. ಅಪಘಾತದ ಸಮಯದಲ್ಲಿ ನಾನು ಕಾರಿನ ಮುಂಭಾಗದಲ್ಲಿಯೇ ಚಾಲಕನ ಪಕ್ಕದ ಸೀಟಿನಲ್ಲಿ ಕುಳಿತುಕೊಂಡಿದ್ದೆನು. ನನ್ನ ತೊಡೆಯ ಮೇಲೆ ನನ್ನ ಮಗಳನ್ನು ಕೂರಿಸಿಕೊಂಡಿದ್ದೆನು. ಆ ಸಮಯದಲ್ಲಿ ನಾನು ಸೀಟ್ ಬೆಲ್ಟ್ ಹಾಕಿಕೊಂಡಿರಲಿಲ್ಲ ಎಂದರೆ ಸುಳ್ಳು.

2) ಒಂದು ವೇಳೆ ನಾನು ಸೀಟ್ ಬೆಲ್ಟ್ ಹಾಕಿಕೊಂಡಿದ್ದ ಪಕ್ಷದಲ್ಲಿ ನನಗೆ ಹೆಚ್ಚಿನ

ಗಾಯಗಳು ಆಗುತ್ತಿರಲಿಲ್ಲ ಎಂದರೆ ನಾನು ಸೀಟ್ ಬೆಲ್ಟ್ ಹಾಕಿಕೊಂಡಿದ್ದೆನು.

3) ನನ್ನ ಗಂಡನು ಕಾರನ್ನು ಚಾಲನೆ ಮಾಡುತ್ತಿದ್ದಾಗ ನಾನು ನನ್ನ ಗಂಡನ ಜೊತೆ ಮಾತನಾಡುತ್ತಿದ್ದೆನು ಮತ್ತು ಆ ಕಾರಣದಿಂದ ನನ್ನ ಗಂಡನ ಏಕಾಗ್ರತೆಗೆ ಭಂಗ ತಂದಿದ್ದೇನೆ ಮತ್ತು ಆ ಕಾರಣದಿಂದ ಅಪಘಾತವು ಆಗಿದೆ ಎಂದರೆ ಸುಳ್ಳು.

4) ಅಪಘಾತವು ಆದ **2** ದಿನಗಳ ನಂತರ ನಾವು ಪೋಲಿಸರ ಜೊತೆ ಶಾಮೀಲಾಗಿ ಸುಳ್ಳು ಫಿರ್ಯಾದನ್ನು ಕೊಟ್ಟಿದ್ದೇವೆ ಎಂದರೆ ಸುಳ್ಳು.

5) ಅಪಘಾತವು ಆದ ನಂತರ ನನ್ನನ್ನು ರಾಮನಗರದ ರಾಮಕೃಷ್ಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಅಪಘಾತವು ಹೇಗೆ ಆಯಿತು ಮತ್ತು ವಾಹನದ ಸಂಖ್ಯೆಯನ್ನು ಸದರಿ ಆಸ್ಪತ್ರೆಯ ವೈದ್ಯರ ಬಳಿ ಹೇಳಿದ್ದೇನೆ. ಸದರಿ ಆಸ್ಪತ್ರೆಯಿಂದ ದಾಖಲಾತಿಗಳನ್ನು ತಂದು ಹಾಜರುಪಡಿಸಲು ನನಗೆ ಯಾವುದೇ ತೊಂದರೆಯು ಇರುವುದಿಲ್ಲ.

6) ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **3** ರಲ್ಲಿ ಹೇಳಿರುವಂತಹ ಗಾಯಗಳು ನನಗೆ ಆಗಿರುವುದಿಲ್ಲ ಎಂದರೆ ಸುಳ್ಳು.

7) ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **4** ಮತ್ತು **5** ಗಳಲ್ಲಿ ನಾನು ಹೇಳಿರುವಂತಹ ಯಾವುದೇ ಚಿಕಿತ್ಸೆಗಳನ್ನು ನಾನು ಪಡೆದುಕೊಂಡಿರುವುದಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವಂತಹ ಮೆಡಿಕಲ್ ಬಿಲ್ಲುಗಳು **duplicate** ಬಿಲ್ಲುಗಳು ಆಗಿವೆ ಮತ್ತು ಅವುಗಳಿಗೆ ನಾನು ಆಸ್ಪತ್ರೆಯ ಮೊಹರನ್ನು ಹಾಕಿಸಿಕೊಂಡು ತಂದಿದ್ದೇನೆ ಎಂದರೆ ಸುಳ್ಳು.

8) ಮೆಡಿಕಲ್ ಬಿಲ್ ಸಂಖ್ಯೆ **3** ಮತ್ತು **4** ದಾಖಲೆಗಳು ಒಂದೇ ದಾಖಲೆ ಆಗಿವೆ ಎಂದರೆ ಸುಳ್ಳು.

9) ಮೆಡಿಕಲ್ ಬಿಲ್ ಸಂಖ್ಯೆ **5** ರಲ್ಲಿ ಇರುವಂತಹ ಹಣವನ್ನು ಯಾವ ಉದ್ದೇಶಕ್ಕಾಗಿ ಖರ್ಚು ಮಾಡಲಾಗಿದೆ ಎನ್ನುವ ಬಗ್ಗೆ ನಾನು ಯಾವುದೇ ಪೂರಕ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು. ಅಷ್ಟು ಹಣವನ್ನು ಆಸ್ಪತ್ರೆಯವರಿಗೆ ಕೊಡಲಾಗಿದೆ ಎಂದು ತೋರಿಸಲು ರಶೀದಿಯನ್ನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಮೆಡಿಕಲ್ ಬಿಲ್ ಸಂಖ್ಯೆ **6** ರಿಂದ **34** ರ ಬಿಲ್ ಗಳಿಗೆ ಸಂಬಂಧಿಸಿದಂತೆ ಪೂರಕವಾದಂತಹ ದಾಖಲಾತಿಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು. ಮೆಡಿಕಲ್ ಬಿಲ್ ಸಂಖ್ಯೆ **33** ಮುಂಗಡ ಹಣ ಪಾವತಿ ರಶೀದಿ ಆಗಿದೆ ಎಂದರೆ ಸುಳ್ಳು. ಬಿಲ್ ಸಂಖ್ಯೆ **33** ರಲ್ಲಿ ಇರುವ ಹಣವನ್ನು ಈಗಾಗಲೇ ಫೈನಲ್ ಬಿಲ್ ನಲ್ಲಿ

ಸೇರಿಸಲಾಗಿದೆ ಮತ್ತು ಹಾಗಿದ್ದರೂ ಸಹಾ ಹೆಚ್ಚಿನ ಹಣವನ್ನು ಪಡೆಯುವ ಉದ್ದೇಶದಿಂದ ನಾನು ಮುಂಗಡ ಹಣ ಪಾವತಿ ರಶೀದಿಯನ್ನು ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

10) ಡಿ.ಜಿ.ಎಸ್. ಆಸ್ಪತ್ರೆಯವರು ನೀಡಿರುವಂತಹ ಮೆಡಿಕಲ್ ಬಿಲ್ಲುಗಳಿಗೆ ಸಂಬಂಧಪಟ್ಟ ಹಾಗೆ ಸದರಿ ಆಸ್ಪತ್ರೆಯ ಅಧಿಕಾರಿಗಳನ್ನು ವಿಚಾರಣೆ ಮಾಡಲು ತೊಂದರೆ ಇರುದಿಲ್ಲ.

11) ವೈದ್ಯರು ನೀಡಿರುವಂತಹ ಸಲಹಾ ಸೂಚಿ ಚೀಟಿ **(Prescriptions)** ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

12) ನನ್ನ ಚಿಕಿತ್ಸೆಗಾಗಿ ನಾನು ಖರ್ಚು ಮಾಡಿರುವಂತಹ ಹಣವನ್ನು ನಾನು ಈಗಾಗಲೇ ವೈದ್ಯಕೀಯ ಖರ್ಚು ಮರುಪಾವತಿ **(reimbursement)** ಅಡಿಯಲ್ಲಿ ವಾಪಸ್ಸು ಪಡೆದುಕೊಂಡಿದ್ದೇನೆ ಮತ್ತು **duplicate** ಬಿಲ್ಲುಗಳನ್ನು ಹಾಜರುಪಡಿಸಿ ನಾನು ಹೆಚ್ಚಿನ ಪರಹಾರ ಪಡೆಯಲು ಪ್ರಯತ್ನ ಪಡುತ್ತಿದ್ದೇನೆ ಎಂದರೆ ಸುಳ್ಳು.

13) ನನ್ನ ವೈದ್ಯಕೀಯ ಚಿಕಿತ್ಸೆಗಾಗಿ **20** ಲಕ್ಷ ರೂಪಾಯಿಗಳು ಖರ್ಚು ಆಗಿದೆ ಮತ್ತು ಇತರೆ ಸಾಂದರ್ಭಿಕ ವೆಚ್ಚಕ್ಕಾಗಿ

ರೂ.2 ಲಕ್ಷದ 40 ಸಾವಿರ ಖರ್ಚಾಗಿದೆ ಎಂದು ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಮುಂದುವರಿದ ಚಿಕಿತ್ಸೆಗಾಗಿ 3 ಲಕ್ಷ ರೂಪಾಯಿಗಳು ಬೇಕಾಗುತ್ತದೆ ಎನ್ನುವ ಸಂಬಂಧವಾಗಿ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸುಳ್ಳು.

14) ನಾನು ಬಿ.ಎಸ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಟೈಲರಿಂಗ್ ಮತ್ತು ಬೇಕಿಂಗ್ ಕೆಲಸ ಮಾಡುತ್ತಿದ್ದೆನು ಮತ್ತು ಆ ಮೂಲಕ ಒಂದು ತಿಂಗಳಿಗೆ 24 ಸಾವಿರ ರೂಪಾಯಿಗಳನ್ನು ಸಂಪಾದನೆ ಮಾಡುತ್ತಿದ್ದೆನು ಎಂಬುದಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು. ನನ್ನ ಅರ್ಜಿಯಲ್ಲಿ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಾನು ಬೇಕಿಂಗ್ ಕೆಲಸ ಮಾಡುತ್ತಿದ್ದೆನು ಎಂಬುದಾಗಿ ಹೇಳಿರುವುದಿಲ್ಲ ಎಂದರೆ ಸುಳ್ಳು.

15) ಅಪಘಾತದ ಸಂಬಂಧವಾಗಿ ನಾನು ಪೋಲಿಸರಿಗೆ ನೀಡಿರುವಂತಹ ಹೇಳಿಕೆಯಲ್ಲಿ ನಾನು ಗೃಹಿಣಿ ಆಗಿದ್ದೇನೆ ಎಂದು ಮಾತ್ರ ಹೇಳಿಕೊಂಡಿದ್ದೇನೆ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವಂತಹ ಎಲ್ಲಾ ದಾಖಲೆಗಳಲ್ಲಿಯು ನಾನು ಕೇವಲ ಗೃಹಿಣಿಯಾಗಿದ್ದೇನೆ ಎಂದು ಮಾತ್ರ ಹೇಳಿಕೊಂಡಿದ್ದೇನೆ ಎಂದರೆ ಸುಳ್ಳು. ಟೈಲರಿಂಗ್ ಮತ್ತು ಬೇಕಿಂಗ್

ವಿಷಯಗಳಲ್ಲಿ ನಾನು ತರಬೇತಿ ಪಡೆದಿದ್ದೇನೆ ಎನ್ನುವ ಬಗ್ಗೆ ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

16) ನಾನು ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ ಮತ್ತು ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ನಾನು ಕೆಲಸ ಮಾಡುತ್ತಿದ್ದೆನು ಎಂಬುದಾಗಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ನಾನು ಮುಂದುವರಿದ ಚಿಕಿತ್ಸೆಯನ್ನು ಪಡೆಯಬೇಕಾಗಿದೆ ಎಂಬ ಬಗ್ಗೆ ಯಾವುದೇ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸುಳ್ಳು.

17) ಅಪಘಾತದಲ್ಲಿ ನನಗೆ ಆಗಿದ್ದಂತಹ ಗಾಯಗಳೆಲ್ಲವೂ ಸಂಪೂರ್ಣವಾಗಿ ವಾಸಿ ಆಗಿವೆ ಮತ್ತು ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದ ಖಂಡಿಕೆ **10** ರಲ್ಲಿ ಸುಳ್ಳು ಹೇಳಿದ್ದೇನೆ ಎಂದರೆ ಸುಳ್ಳು.

18) ಅಪಘಾತದ ಸಮಯದಲ್ಲಿ ನನಗೆ **31** ವರ್ಷಕ್ಕಿಂತ ಹೆಚ್ಚಿನ ವಯಸ್ಸು ಆಗಿತ್ತು ಮತ್ತು ನನ್ನ ವಯಸ್ಸನ್ನು ನಾನು ಕಡಿಮೆ ಹೇಳುತ್ತಿದ್ದೇನೆ ಎಂದರೆ ಸುಳ್ಳು. ದಾಖಲೆಗಳನ್ನು ಸೃಷ್ಟಿ ಮಾಡಿ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.